## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 14-11-2022

### ಗಾಂಧಿಗAಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 174/2022 ಕಲಂ ಮನುಷ್ಯ ಕಾಣೆ :-

ದಿನಾಂಕ: 13/11/2022 ರಂದು 1430 ಗಂಟೆಗೆ ಫಿರ್ಯಾದಿ ಶ್ರೀ ಸೂರ್ಯಕಾಂತ ತಂದೆ ತುಳಜಪ್ಪಾ ಮೇದಾ ವಯಸ್ಸು: 57ವರ್ಷ ಜಾತಿ: ಮೇದಾರ ಉ: ಭೂ-ಜಲ ಮಂಡಳಿಯಲ್ಲಿ ನೌಕರ ಸಾ: ಮನೆ ನಂ 9-12-142/1, 8ನೇ ಕ್ರಾಸ ರೇಣುಕಾ ಮಂದಿರ ಹತ್ತಿರ ವಿದ್ಯಾ ನಗರ ಬೀದರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಂಶವೆನೆAದರೆ, ಫಿರ್ಯಾದಿಗೆ 2 ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇರುತ್ತಾರೆ. ದಿನಾಂಕ 04/09/2022 ರಂದು ಫರ್ಯಾದಿಯು ಕೆಲಸಕ್ಕೆ ರಜೆ ಹಾಕಿ ಬೆಂಗಳೂರಿನಿAದ ಬೀದರಗೆ ಮನೆಗೆ ಬಂದಿದ್ದು, ಮನೆಯಲ್ಲಿ ಮಗನಾದ ಪ್ರುವಿಣ ಈತನು ಕಾಣದೆ ಇದ್ದಾಗ ಹೆಂಡತಿ ಮತ್ತು ಮಗಳಿಗೆ ಕೇಳಿದಾಗ ಪ್ರುವಿಣ ಇತನು ದಿನಾಂಕ: 03/09/2022 ರಂದು ಮಧ್ಯಾಹ್ನ 03-00 ಗಂಟೆ ಸುಮಾರಿಗೆ ಗಣೇಶ ವಿಸರ್ಜನೆ ಇರುವದರಿಂದ ನೋಡಿಕೊಂಡು ಬರುತ್ತೆನೆಂದು ಹೇಳಿ ಮನೆಯಿಂದ ಹೊರಗಡೆ ಹೋದವನು ಮರಳಿ ಮನೆಗೆ ಬಂದಿರುವದಿಲ್ಲಾ ಅಂತ ತಿಳಿಸಿದರು. ಮಗ ಪ್ರುವಿಣ ಇತನು ದಿನಾಂಕ 03/09/2022 ರಂದು ಮಧ್ಯಾಹ್ನ 03-00 ಗಂಟೆಗೆ ಮಗನಾದ ಪ್ರುವೀಣ ತಂದೆ ಸೂರ್ಯಕಾಂತ ಮೇದಾ ವಯ 24 ವರ್ಷ ಉ|| ಇಂಜಿನೇರಿAಗ ವಿದ್ಯಾರ್ಥಿ ಇತನು ನಾನು ಗಣೇಶ ವಿಸರ್ಜನೆ ಇರುವದರಿಂದ ನೋಡಿಕೊಂಡು ಬರುತ್ತೆನೆಂದು ಹೇಳಿ ಮನೆಯಿಂದ ಹೊರಗಡೆ ಹೋದವನು ಮರಳಿ ಮನೆಗೆ ಬರದೇ ಇದ್ದುದ್ದಿರಂದ ಬೀದರ ನಗರದಲ್ಲೆಲ್ಲಾ ಹುಡುಕಾಡಿದ್ದು ಸಿಕ್ಕಿರುವುದಿಲ್ಲಾ. ಮಗ ಪ್ರುವೀಣ ಈತನು ಈ ಹಿಂದೆಯು ಕೂಡಾ ಅಂದರೆ ದಿನಾಂಕ: 29/8/2021 ರಂದು ನಮ್ಮ ಮನೆಯಿಂದ ಕಾಣೆಯಾಗಿದ್ದು, ಆತನು ಕಾಣೆಯಾದ ಪ್ರಕರಣ ದಾಖಲಿಸಿದ್ದು, ಕೇಲವು ತಿಂಗಳದ ನಂತರ ಮರಳಿ ಮನೆಗೆ ಬಂದಿರುತ್ತಾನೆ. ಇಂದಿನವರೆಗೂ ಆತನು ಮರಳಿ ಮನೆಗೆ ಬರಬಹುದು ಅಂತಾ ಭಾವಿಸಿ ಇಲ್ಲಿಯವರೆಗೆ ಸುಮ್ಮನಿದ್ದೆ. ಆದರೆ ಮಗ ಇಂದಿನವರೆಗೂ ಮರಳಿ ಮನೆಗೆ ಬರದೇ ಇದ್ದುದ್ದರಿಂದ ಸಂಬAಧಿಕರೆಲ್ಲರಿಗೂ ಕರೆ ಮಾಡಿ ಮಗನ ಬಗ್ಗೆ ವಿಚಾರಿಸಿದ್ದು, ಕಾಣೆಯಾಗಿರುತ್ತಾನೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.